ಅ) ಚಿಂತಾಮಣಿ ತಾಲ್ಲೂಕು ಕೈವಾರ ಹೋಬಳಿ ನೆರ್ಕಕಲ್ಲು ತಾಲ್ಲೂಕು ಗ್ರಾಮದ ಸರ್ವೆ ನಂ. 13ರಲ್ಲಿ 2-38 ಗುಂಟೆ ಜಮೀನನ್ನು ಗುಂಡುತೋಪು ಜಮೀನು ಎಂದು ಕಾದಿರಿಸಲಾಗಿದೆ;

ಆ) ಹಾಗಿದ್ದಲ್ಲಿ, ಕಾಯ್ದಿರಿಸಿದ ಜಮೀನು ಒತ್ತುವರಿಯಾಗಿದೆಯೇ;

ಇ) ಒತ್ತುವರಿಯಾಗಿದ್ದಲ್ಲಿ, ಒತ್ತುವರಿದಾರರನ್ನು ತೆರವುಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಹೌದು. ಚಿಂತಾಮಣಿ ತಾಲ್ಲೂಕು, ಕೈವಾರ ಹೋಬಳಿ ನೆರ್ಕಕಲ್ಲು ಗ್ರಾಮದ ಸ.ನಂ. 13ರಲ್ಲಿ 2 ಎಕರೆ 38 ಗುಂಟೆ ಜಮೀನು ಸರ್ಕಾರಿ ಖರಾಬು ತೋಪು ಎಂಬುದಾಗಿ ಪಹಣಿಯಲ್ಲಿ ನಮೂದಾಗಿರುತ್ತದೆ.

ಆ) ಹೌದು. ಸದರಿ ಸರ್ಕಾರಿ ಖರಾಬು ತೋಪು ಜಮೀನು ಒತ್ತುವರಿ ಮಾಡಿಕೊಂಡಿರುವವರ ಹೆಸರುಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸ.	ಹೆಸರು	ವಿಸ್ತೀರ್ಣ (ಎ/ಗು)
1	ಶ್ರೀ ವೆಂಕಟರಾಯಪ್ಪ ಬಿನ್ ನಾರಾಯಣಪ್ಪ	0.30
2	ಶ್ರೀ ವೆಂಕಟೇಶಪ್ಪ ಬಿನ್ ಮುನಿಶಾಮಪ್ಪ	0.07
3	ಶ್ರೀ ಕೃಷ್ಣಪ್ಪ ಬಿನ್ ಪಿಳ್ಳೇಗೌಡ	0.21
4	ಶ್ರೀ ರಾಮಪ್ಪ ಬಿನ್ ಪಿಳ್ಳೇಗೌಡ	0.27
5	ಶ್ರೀ ಮುನಿನಾರಾಯಣಪ್ಪ ಬಿನ್ ವೆಂಕಟಪ್ಪ	0.33
	ಒಟ್ಟು	**2.38**

ಇ) ದಿ: 28.02.2011ರಂದು ತಹಶೀಲ್ದಾರರು ಸ್ಥಳಕ್ಕೆ ಭೇಟಿ ನೀಡಿ ಒತ್ತುವರಿಯನ್ನು ತೆರವುಗೊಳಿಸಿರುತ್ತಾರೆ.

ಜಲಾಶಯಗಳ ಗೇಟುಗಳು

307 (725) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಲಾಶಯಗಳಲ್ಲಿ ಹಳೆಯದಾದ ಗೇಟುಗಳನ್ನು ಬದಲಾವಣೆ ಮಾಡುವ ಉದ್ದೇಶ ಸರ್ಕಾರದ ಮುಂದಿದೆ. ಇದಕ್ಕೆ

ತಗಲುವ ಅಂದಾಜು ವೆಚ್ಚವೆಷ್ಟು; ಈ ಕಾಮಗಾರಿಗಳನ್ನು ಯಾವಾಗ ಕೈಗೊಳ್ಳಲಾಗುವುದು; ಈ ಪ್ರತಿ ಕಾಮಗಾರಿಗೆ ತಗಲುವ ವೆಚ್ಚವೆಷ್ಟು;

ಆ) ರಾಜ್ಯದ ವಿವಿಧ ಜಲಾಶಯಗಳಲ್ಲಿ ಅಳವಡಿಸಿರುವ ಗೇಟುಗಳನ್ನು ಯಾವ ವರ್ಷದಲ್ಲಿ ಅಳವಡಿಸಲಾಗಿದೆ. ಈ ಗೇಟುಗಳ ಆಯುಷ್ಯವೆಷ್ಟು; ಈ ಪೈಕಿ ಎಷ್ಟು ಗೇಟುಗಳು ಸುಸ್ಥಿತಿಯಲ್ಲಿವೆ ಮತ್ತು ಎಷ್ಟು ಗೇಟುಗಳು ದುಸ್ಥಿತಿಯಲ್ಲಿವೆ; (ಜಲಾಶಯವಾರು ವಿವರಗಳನ್ನು ನೀಡುವುದು)

ಇ) ಬೀದರ್ ಜಿಲ್ಲೆಯ ಕಾರಂಜಾ ಜಲಾಶಯಕ್ಕೆ ಅಳವಡಿಸಿರುವ ಗೇಟು ಸಹ ದುಸ್ಥಿತಿಯಲ್ಲಿರುವುದು ನಿಜವೇ; ಹಾಗಿದ್ದಲ್ಲಿ, ಈ ಗೇಟನ್ನು ಸಹ ಬದಲಾವಣೆ ಮಾಡಲಾಗುವುದೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):

ಅ) ರಾಜ್ಯದ ಈ ಕೆಳಕಾಣಿಸಿದ ಜಲಾಶಯಗಳಲ್ಲಿ ಹಳೆಯದಾದ ಗೇಟುಗಳನ್ನು ಬದಲಾಯಿಸಲು ಉದ್ದೇಶಿಸಲಾಗಿದೆ.

(ರೂ. ಕೋಟಿಗಳಲ್ಲಿ)

ಜಲಾಶಯದ ಹೆಸರು	ಗೇಟುಗಳ ಸಂಖ್ಯೆ	ಅಂದಾಜು ವೆಚ್ಚ	ಅವಧಿ
ನಾರಾಯಣಪುರ	30	50.00	ಪ್ರಗತಿಯಲ್ಲಿದೆ
ಕೃಷ್ಣರಾಜ ಸಾಗರ (+ 80)	16	7.20	
ತಾರಕ	1	0.70	ಪೂರ್ಣಗೊಳಿಸಲಾಗಿದೆ
ಚೆಕ್ಕಿಹೊಳೆ (ತೂಬು)		0.14	

ಆ) ರಾಜ್ಯದ ವಿವಿಧ ಜಲಾಶಯಗಳಲ್ಲಿ ಅಳವಡಿಸಿರುವ ಗೇಟುಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಗೇಟುಗಳ ಬಾಳಿಕೆ ಕುರಿತಂತೆ ಅಧ್ಯಯನ ಕೈಗೊಂಡಿರುವುದಿಲ್ಲ. ಕೆ.ಆರ್.ಎಸ್. ಗೇಟುಗಳ ಕುರಿತಂತೆ 1948ರ ಕೈಪಿಡಿಯಂತೆ ಗೇಟುಗಳ ಸರಾಸರಿ ಆಯುಷ್ಯ 40 ವರ್ಷಗಳು.

ಇ) ಬೀದರ್ ಜಿಲ್ಲೆಯ ಕಾರಂಜಾ ಜಲಾಶಯಕ್ಕೆ ಅಳವಡಿಸಿರುವ ಗೇಟುಗಳು ಸುಸ್ಥಿತಿಯಲ್ಲಿವೆ. ರಾಜ್ಯ ಆಣೆಕಟ್ಟು ಸುರಕ್ಷತಾ ಸಮಿತಿಯ ವರದಿಯಲ್ಲಿನ ಶಿಫಾರಸ್ಸು ಹಾಗೂ ಸಲಹೆಯಂತೆ ಕೆಲವು ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. 725ಕ್ಕೆ ಅನುಬಂಧ

ಕ್ರ ಸಂ.	ಯೋಜನೆಯ ಹೆಸರು	ಯೋಜನೆಯ ಸ್ಥಳ / ಜಿಲ್ಲೆ	ಗೇಟುಗಳ ಸಂಖ್ಯೆ	ಅಳವಡಿಸಿರುವ ವರ್ಷ	ಗೇಟುಗಳ ಸ್ಥಿತಿ
1	2	3	4	5	6
ಬೃಹತ್ ನೀರಾವರಿ ಯೋಜನೆ					
1	ಭೀಮಾ ಏತ	ಗುಲಬರ್ಗಾ ಜಿಲ್ಲೆ ಅಫಜಲಪೂರ ತಾಲ್ಲೂಕಿನ ಸೊನ್ನ ಗ್ರಾಮದ ಹತ್ತಿರ	29	2010	ಸುಸ್ಥಿತಿಯಲ್ಲಿದೆ
2	ಬೆಣ್ಣೆತೋರಾ	ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಹೇರೂರು (ಕೆ) ಗ್ರಾಮದ ಹತ್ತಿರ	6	2001	ಸುಸ್ಥಿತಿಯಲ್ಲಿದೆ
3	ಕಾರಂಜಾ	ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಬ್ಯಾಲಹಳ್ಳಿ ಗ್ರಾಮದ ಹತ್ತಿರ	6	1989	ಸುಸ್ಥಿತಿಯಲ್ಲಿದೆ

1	2	3	4	5	6
4	ಹಿಡಕಲ್	ಬೆಳಗಾವಿ	10	1975–76	ಸುಸ್ಥಿತಿಯಲ್ಲಿದೆ
5	ಮಾರ್ಕಂಡೇಯ	ಬೆಳಗಾವಿ	6	2006–07	ಸುಸ್ಥಿತಿಯಲ್ಲಿದೆ
6	ಹಿಪ್ಪರಗಿ	ಬೆಳಗಾವಿ	22	2004	ಸುಸ್ಥಿತಿಯಲ್ಲಿದೆ
7	ತುಂಗಭದ್ರಾ	ಹೊಸಪೇಟೆ	33	1953	ಸುಸ್ಥಿತಿಯಲ್ಲಿದೆ
8	ನಾರಾಯಣಪುರ	ನಾರಾಯಣಪುರ	30	1975–1982	ಈ ಅಣೆಕಟ್ಟಿನ 30 ಗೇಟುಗಳ ಪೈಕಿ ಗೇಟ್ ಸಂಖ್ಯೆ 5 ಅನ್ನು ಹೊಸದಾಗಿ ಅಳವಡಿಸಲಾಗಿದೆ. ಬಾಕಿ ಉಳಿದ 29 ಗೇಟುಗಳ ಬಲವರ್ಧನೆ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದರಿಂದ ಈ ಗೇಟುಗಳು ಸುಸ್ಥಿತಿಯಲ್ಲಿರುತ್ತದೆ

1	2	3	4	5	6
9	ಆಲಮಟ್ಟಿ	ಆಲಮಟ್ಟಿ	26	2001	ಸುಸ್ಥಿತಿಯಲ್ಲಿವೆ
10	ಯಗಚಿ	ಹಾಸನ	ಕ್ರೆಸ್ಟ್ ಗೇಟ್–5	2000–01	ಎಲ್ಲಾ ಗೇಟುಗಳು ಸುಸ್ಥಿತಿಯಲ್ಲಿವೆ
11	ಭದ್ರಾ	ಶಿವಮೊಗ್ಗ	5	1964	ಎಲ್ಲಾ ಗೇಟುಗಳು ಸುಸ್ಥಿತಿಯಲ್ಲಿವೆ
12	ತುಂಗಾ ಮೇ.ಯೋ.	ಶಿವಮೊಗ್ಗ	22	2004–05	ಎಲ್ಲಾ ಗೇಟುಗಳು ಸುಸ್ಥಿತಿಯಲ್ಲಿವೆ
13	ಹಾರಂಗಿ	ಕೊಡಗು	0	1982	ಈ ಎಲ್ಲಾ ಗೇಟುಗಳು ಉತ್ತಮ ಸ್ಥಿತಿಯಲ್ಲಿದ್ದು ಕಾರ್ಯ ನಿರ್ವಹಿಸುತ್ತಿರುತ್ತದೆ
14	ಹೇಮಾವತಿ	ಗೊರೂರು	ಕ್ರೆಸ್ಟ್ ಗೇಟ್–6	1980–81	ಎಲ್ಲಾ ಗೇಟುಗಳು ಸುಸ್ಥಿತಿಯಲ್ಲಿವೆ

1	2	3	4	5	6
15	ಕಬಿನಿ	ಮೈಸೂರು	ಕ್ರೆಸ್ಟ್ ಗೇಟ್–4 ರಿವರ್ ಸ್ಲೂಯಿಸ್–3	1974	ಈ ಎಲ್ಲಾ ಗೇಟುಗಳು ಉತ್ತಮ ಸ್ಥಿತಿಯಲ್ಲಿದ್ದು ಕಾರ್ಯ ನಿರ್ವಹಿಸುತ್ತಿರುತ್ತದೆ
			+12 ಅಡಿ – 8		ಈ ಗೇಟುಗಳ ದ್ವಾರಗಳನ್ನು ಸಂಪೂರ್ಣವಾಗಿ ಕಾಂಕ್ರೀಟ್‌ನಿಂದ ತುಂಬು ಮುಚ್ಚಲಾಗಿದೆ
			+50 ಅಡಿ – 3		ಈ ಗೇಟುಗಳನ್ನು ಏರಿಳಿಸಲು ಕಷ್ಟಕರವಾಗಿದ್ದ ಕಾರಣ ಹಾಗೂ ನೀರು ಸೋಲಾಗುತ್ತಿರುವುದರಿಂದ ಈ ಗೇಟುಗಳನ್ನು ಬದಲಾಯಿಸಲು ಕ್ರಮ ಕೈಗೊಳ್ಳಲಾಗಿದೆ

1	2	3	4	5	6
			+53 ಅಡಿ – 5		ಈ ಗೇಟುಗಳ ದ್ವಾರಗಳನ್ನು ಮುಚ್ಚಲಾಗಿದೆ
			+60 ಅಡಿ – 4		+60 ಅಡಿ ಮಟ್ಟದಲ್ಲಿ ನೀರಾವರಿಗಾಗಿ ವಿ.ಸಿ. ನಾಲೆಗೆ 3 ಸ್ಲೂಯಿಸ್ ಹಾಗೂ ಆರ್.ಬಿ.ಎಲ್.ಎಲ್. ನಾಲೆಗೆ 1 ಸ್ಲೂಯಿಸ್ ಅನ್ನು ಅಳವಡಿಸಲಾಗಿದ್ದು, ಇದರಲ್ಲಿ ವಿಶ್ವೇಶ್ವರಯ್ಯ ಕಾಲುವೆಯ 3 ಗೇಟುಗಳನ್ನು ಬದಲಾಯಿಸಲು ಕ್ರಮ ಕೈಗೊಳ್ಳಲಾಗಿದೆ

1	2	3	4	5	6
16	ಕೃಷ್ಣರಾಜಸಾಗರ	ಮಂಡ್ಯ	+80 ಅಡಿ–16	1933	ಈ ಗೇಟುಗಳು ತೀರಾ ದುಸ್ಥಿತಿಯಲ್ಲಿದ್ದುದರಿಂದ ಇವುಗಳನ್ನು ಬದಲಾಯಿಸುವ ಕಾಮಗಾರಿಯನ್ನು 2009ನೇ ಸಾಲಿನಲ್ಲಿ ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತವೆ. ಫೆಬ್ರವರಿ 2011ರ ಅಂತ್ಯಕ್ಕೆ 12 ಗೇಟುಗಳನ್ನು ಬದಲಾಯಿಸಲಾಗಿದ್ದು, ಉಳಿಕೆ ಗೇಟುಗಳನ್ನು ಮಾರ್ಚ್ 2011ರ ಒಳಗಾಗಿ ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ.

1	2	3	4	5	6
			+103 ಅಡಿ – 48		ಈ ಗೇಟುಗಳು ಉತ್ತಮ ಸ್ಥಿತಿಯಲ್ಲಿದೆ
			+106 ಅಡಿ – 40		ಈ ಗೇಟುಗಳು ಉತ್ತಮ ಸ್ಥಿತಿಯಲ್ಲಿವೆ
			+114 ಅಡಿ – 48		ಈ ಗೇಟುಗಳು ಉತ್ತಮ ಸ್ಥಿತಿಯಲ್ಲಿದೆ

ಕ್ರ. ಸಂ.	ಯೋಜನೆಯ ಹೆಸರು	ಯೋಜನೆಯ ಸ್ಥಳ / ಜಿಲ್ಲೆ	ಗೇಟುಗಳ ಸಂಖ್ಯೆ	ಅಳವಡಿಸಿರುವ ವರ್ಷ	ಗೇಟುಗಳ ಸ್ಥಿತಿ
1	2	3	4	5	6
ಮಧ್ಯಮ ನೀರಾವರಿ ಯೋಜನೆ					
1	ಗಂಡೋರಿನಾಲಾ	ಗುಲಬರ್ಗಾ ಜಿಲ್ಲೆಯ ಹಾಗೂ ಗುಲಬರ್ಗಾ ತಾಲ್ಲೂಕಿನ ಬೆಳಕೋಟ ಗ್ರಾಮದ ಹತ್ತಿರ	8	2002	ಸುಸ್ಥಿತಿಯಲ್ಲಿದೆ
2	ಅಮರ್ಜಾ	ಗುಲಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಸಂಗೋಳಗಿ ಗ್ರಾಮದ ಹತ್ತಿರ	5	2001	ಸುಸ್ಥಿತಿಯಲ್ಲಿವೆ
3	ಮುಲ್ಲಾಮಾರಿ ಕೆಳದಂಡೆ	ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ನಾಗರಾಳ ಗ್ರಾಮದ ಹತ್ತಿರ	5	2001	ಸುಸ್ಥಿತಿಯಲ್ಲಿವೆ

1	2	3	4	5	6
4	ಚಂದ್ರಂಪಳ್ಳಿ	ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಚಂದ್ರಂಪಳ್ಳಿ ಗ್ರಾಮದ ಹತ್ತಿರ	6	1975	ಸುಸ್ಥಿತಿಯಲ್ಲಿವೆ
5	ಹತ್ತಿಕುಣಿ	ಯಾದಗಿರಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಹತ್ತಿಕುಣಿ ಗ್ರಾಮದ ಹತ್ತಿರ	9	1973	ಸುಸ್ಥಿತಿಯಲ್ಲಿದೆ
6	ಚುಳಕಿನಾಲಾ	ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಮಸ್ತಾಪೂರ ಗ್ರಾಮದ ಹತ್ತಿರ	8	1997	ಸುಸ್ಥಿತಿಯಲ್ಲಿವೆ
7	ಹಿರೇಹಳ್ಳ	ಕೊಪ್ಪಳ	6	2007	ಸುಸ್ಥಿತಿಯಲ್ಲಿವೆ
8	ಮಸ್ಕಿನಾಲಾ	ರಾಯಚೂರು	4	2007	ಸುಸ್ಥಿತಿಯಲ್ಲಿವೆ

1	2	3	4	5	6
9	ಹಗರಿ ಬೊಮ್ಮನಹಳ್ಳಿ	ಬಳ್ಳಾರಿ ಜಿಲ್ಲೆ	10	1972	ಸುಸ್ಥಿತಿಯಲ್ಲಿವೆ
10	ಕನಕನಾಲಾ	ಕೊಪ್ಪಳ	–	1975	ಈ ಜಲಾಶಯಕ್ಕೆ ಗೇಟುಗಳನ್ನು ಅಳವಡಿಸಿರುವುದಿಲ್ಲ
11	ನಾರೀಹಳ್ಳ	ಬಳ್ಳಾರಿ ಜಿಲ್ಲೆ	5	1983	ಸುಸ್ಥಿತಿಯಲ್ಲಿದೆ
12	ಕಣ್ವ	ರಾಮನಗರ	ಕ್ರೆಸ್ಟ್‌ಗೇಟ್–5	1946–2010	ಈ ಜಲಾಶಯದ ನೀರಾವರಿ ತೂಬು ಸುಸ್ಥಿತಿಯಲ್ಲಿದ್ದು, ರೇಡಿಯಲ್ ಗೇಟ್‌ಗಳನ್ನು 2010ರಲ್ಲಿ ಹೊಸದಾಗಿ ಅಳವಡಿಸಲಾಗಿದೆ

1	2	3	4	5	6
13	ಮಾರ್ಕೋನಹಳ್ಳಿ	ಮಾರ್ಕೋನಹಳ್ಳಿ	ಸ್ಕವರಿಂಗ್ ಸ್ಲೂಯಿಸ್–5	1939–40	2000–10ನೇ ಸಾಲಿನಲ್ಲಿ ಹಳೆಯ ಗೇಟುಗಳನ್ನು ಬದಲಾಯಿಸಿ, ಹೊಸ ಗೇಟುಗಳನ್ನು ಅಳವಡಿಸಲಾಗಿದ್ದು, ಗೇಟುಗಳು ಸುಸ್ಥಿತಿಯಲ್ಲಿರುತ್ತದೆ.
14	ಹೆಬ್ಬಳ	ಮೈಸೂರು	1	1958	ಗೇಟು ಉತ್ತಮ ಸ್ಥಿತಿಯಲ್ಲಿದ್ದು, ಕಾರ್ಯ ನಿರ್ವಹಿಸುತ್ತಿರುತ್ತದೆ
15	ನುಗು	ಮೈಸೂರು	ಕ್ರೆಸ್ಟ್‌ಗೇಟ್–2 ರಿವರ್ ಸ್ಲೂಯಿಸ್–1	1959	ಈ ಗೇಟುಗಳು ಉತ್ತಮ ಸ್ಥಿತಿಯಲ್ಲಿದ್ದು, ಕಾರ್ಯ ನಿರ್ವಹಿಸುತ್ತಿರುತ್ತದೆ

1	2	3	4	5	6
16	ಚಿಕ್ಕಹೊಳೆ	ಚಾಮರಾಜನಗರ	ಸ್ಪಿಲ್‌ವೇ ಗೇಟ್–4	1958	ಈ ಗೇಟುಗಳು ಉತ್ತಮ ಸ್ಥಿತಿಯಲ್ಲಿದ್ದು, ಕಾರ್ಯ ನಿರ್ವಹಿಸಿರುತ್ತದೆ
17	ಮಂಗಳ	ತುಮಕೂರು	ಸ್ಪಿಲ್‌ವೇ ಗೇಟ್–12	1993	ಈ ಜಲಾಶಯವನ್ನು 1957ರಲ್ಲಿ ನಿರ್ಮಿಸಿದ್ದು, ಆ ಸಮಯದಲ್ಲಿ ಗೇಟ್‌ನ್ನು ಅಳವಡಿಸಿರಲಿಲ್ಲ ಈ ಜಲಾಶಯದ ಶೇಖರಣಾ ಸಾಮರ್ಥ್ಯವನ್ನು ಹೆಚ್ಚಿಸುವ ಸಂದರ್ಭದಲ್ಲಿ 1993ರಲ್ಲಿ ಕ್ರಸ್ಟ್ ಗೇಟುಗಳನ್ನು ಅಳವಡಿಸಲಾಗಿದ್ದು, ಈ ಎಲ್ಲಾ 12 ಗೇಟುಗಳು ಸುಸ್ಥಿತಿಯಲ್ಲಿದೆ

1	2	3	4	5	6
18	ಸುವರ್ಣಾವತಿ	ಮೈಸೂರು	ಸ್ಪಿಲ್‌ವೇ ಗೇಟ್–3 ರಿವರ್ ಸೂಯಿಸ್–2	1984	ಈ ಗೇಟುಗಳು ಉತ್ತಮ ಸ್ಥಿತಿಯಲ್ಲಿದ್ದು ಕಾರ್ಯ ನಿರ್ವಹಿಸುತ್ತಿರುತ್ತದೆ
19	ಗುಂಡಾಲ್	ಚಾಮರಾಜನಗರ		1980	ಈ ಗೇಟುಗಳು ಉತ್ತಮ ಸ್ಥಿತಿಯಲ್ಲಿದ್ದು, ಕಾರ್ಯ ನಿರ್ವಹಿಸುತ್ತಿರುತ್ತದೆ
20	ನಲ್ಲೂರ ಅಮಾನಿಕೆರೆ	ಮೈಸೂರು		1975	ಈ ಗೇಟುಗಳು ಉತ್ತಮ ಸ್ಥಿತಿಯಲ್ಲಿದ್ದು ಕಾರ್ಯ ನಿರ್ವಹಿಸುತ್ತಿರುತ್ತದೆ

1	2	3	4	5	6
21	ತಾರಕ	ಮೈಸೂರು	ಕ್ರಸ್ಟ್ ಗೇಟ್–3 ರಿವರ್ ಸ್ಲೂಯಿಸ್–2	1984	3 ಕ್ರೆಸ್ಟ್ ಗೇಟುಗಳನ್ನು 1981ರಲ್ಲಿ ಅಳವಡಿಸಲಾಗಿದ್ದು, ಈ ಪೈಕಿ 1 ಕ್ರೆಸ್ಟ್ ಗೇಟು 2006ರಲ್ಲಿ ಕಿತ್ತು ಹೋಗಿದ್ದರಿಂದ ಬದಲಾವಣೆ ಮಾಡಲಾಗಿದ್ದು, ಪ್ರಸ್ತುತ ಎಲ್ಲಾ ಗೇಟುಗಳು ಸುಸ್ಥಿತಿಯಲ್ಲಿರುತ್ತದೆ
22	ವಾಟೆಹೊಳೆ	ಹಾಸನ	ಕ್ರೆಸ್ಟ್‌ಗೇಟ್–3	1984–85	ಎಲ್ಲಾ ಗೇಟುಗಳು ಸುಸ್ಥಿತಿಯಲ್ಲಿದೆ
23	ಚಿಕ್ಲಿಹೊಳೆ	ಕೊಡಗು		1979	ಗೇಟು ಉತ್ತಮ ಸ್ಥಿತಿಯಲ್ಲಿದ್ದು, ಕಾರ್ಯ ನಿರ್ವಹಿಸುತ್ತಿರುತ್ತದೆ

1	2	3	4	5	6
24	ಮಂಚನಬೆಲೆ	ರಾಮನಗರ	ಕ್ರೆಸ್ಟ್‌ಗೇಟ್–3 ರಿವರ್ ಸ್ಲೂಯಿಸ್–1	1993	ಈ ಗೇಟುಗಳು ಉತ್ತಮ ಸ್ಥಿತಿಯಲ್ಲಿದ್ದು, ಕಾರ್ಯ ನಿರ್ವಹಿಸಿರುತ್ತದೆ
25	ಅರ್ಕಾವತಿ	ಬೆಂಗಳೂರು	ಕ್ರೆಸ್ಟ್‌ಗೇಟ್–4	2004	ಈ ಗೇಟುಗಳು ಉತ್ತಮ ಸ್ಥಿತಿಯಲ್ಲಿದ್ದು, ಕಾರ್ಯ ನಿರ್ವಹಿಸಿರುತ್ತದೆ
26	ಇಗ್ಗಲೂರು	ರಾಮನಗರ	ಸ್ಪಿಲ್‌ವೇ ಗೇಟ್–9 ಎಡದಂಡೆ ನಾಲೆ–1	1996	ಈ ಗೇಟುಗಳು ಉತ್ತಮ ಸ್ಥಿತಿಯಲ್ಲಿದ್ದು, ಕಾರ್ಯ ನಿರ್ವಹಿಸಿರುತ್ತದೆ
27	ಉಡುತೊರೆಹಳ್ಳ	ಮೈಸೂರು	ಕ್ರೆಸ್ಟ್‌ಗೇಟ್–9 ಎಡದಂಡೆ ನಾಲೆ–1	2003	ಈ ಗೇಟುಗಳು ಉತ್ತಮ ಸ್ಥಿತಿಯಲ್ಲಿದ್ದು, ಕಾರ್ಯ ನಿರ್ವಹಿಸಿರುತ್ತದೆ

1	2	3	4	5	6
28	ತೀತಾ	ತುಮಕೂರು	–	1986	ಈ ಜಲಾಶಯಕ್ಕೆ ಗೇಟುಗಳನ್ನು ಅಳವಡಿಸಿರುವುದಿಲ್ಲ
29	ಅಂಜನಾಪುರ	ಶಿವಮೊಗ್ಗ	3	2007–08	ಸುಸ್ಥಿತಿಯಲ್ಲಿದೆ

ಸಿ. ಶ್ರೀನಿವಾಸುಲು
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ–1)
ಜಲಸಂಪನ್ಮೂಲ ಇಲಾಖೆ